ಮೈಸೂರ ಗಿಜಿಟ.

ಸರ್ಕಾರದಿಂದ ಪ್ರಯಿಷ್‌ಲಿದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ॥ 26, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ

ಸರಕಾರೀ ಕಾಗದ ಪತ್ರಗಳು.

ಇಂಡ್ಯ ಗವರ್ನಮೆಂಟಿನ ಅಂಡರ್ ಸೆಕರಟೇರಿಯಾದ ಡಬ್ಲ್ಯು. ಆರ್. ಲಾರೆನ್ಸ್ ಯಸ್ಕ್ವಯರ್, ಸಿ. ಯಸ್. ಯವರಿಂದ, ಮದರಾಸ್, ಬೊಂಬಾಯಿ, ಬಂಗಾಳ ವ ಪಂಜಾಬ್ ಗವರ್ನಮೆಂಟ್‌ಗಳ ಸೆಕರಟೇರಿಗಳಿಗೂ ಸೆಂಟ್ರಲ್ ಪ್ರಾವಿನ್ಸ್ ಅಜವಿುರ್, ವ ಕೊಡಗು ಈ ದೇಶಗಳ ಚೀಫ್ ಕವ್ಮಿಷನರ್‌ಗಳಿಗೂ ಸಹ ರೆವಿನ್ಯೂ ವ ಅಗ್ರಿಕಲ್ ಚುರಲ್ ಇಲಾಖೂ ಸರ್ಕ್ಯುಲರ್ ನಂಬರ್ 46—16—28 A.,

ಮೊಕ್ಕಾಂ ಸಿಂಲಾ, ತಾರೀಖು 26ನೇ ಆಗಸ್ಟ್ 1887.

ಐಯ್ಯಾ,

ಈ ಮಾರ್ಜಿನಲ್ಲಿ ಕಂಡ, ಇದಕ್ಕೆ ಮುಂಚಿನ ಸರ್ಕ್ಯುಲರ್‌ಗಳನ್ನನುಸರಿಸಿ, ಖರ್ಜೂರದ ಗಿಡಗಳ ವ್ಯವಸಾಯವನ್ನು ಕುರಿತು ಡಾ॥ ಈ. ಬೊನೇವಿಯ ಯಂಬವರು ಬರೆದ ರಿಪೋರ್ಟಿನ ಬಂದು ಪ್ರತಿಯನ್ನು ನಿಮ್ಮ ತಿಳುವಳಿಕೆ ಬಗ್ಗೆ ಕಳುಹಿಸುವಂತೆ ಅಪ್ಪಣೇ ಆಗಿರುವದಲ್ಲದೇ, ಸದರೀ ರಿಪೋರ್ಟು ಅಗ್ರಿಕಲ್‌ಚುರಲ್ ಇಲಾಖೆಗಳಿಗೂ, ಡಿಸ್ಟ್ರಿಕ್ಟ್ ಆಫೀಸರುಗಳಿಗೂ ಮತ್ತು ಸದರೀ ಗಿಡವನ್ನ ಅಜಮಾಯಿಷೀ ತರೀಕು ವ್ಯವಸಾಯ ಮಾಡಲಿಚ್ಛೆಯುಳ್ಳ ಇತರರಿಗೂ ಸಹ ಕಳುಹಿಸಲ್ಪಡಬೇಕೆಂಬದಾಗಿಯೂ ಸೂಚಿಸುತ್ತೇನೆ.

ನಂ. 3—15—9A, ತಾರೀಖು 1ನೇ ಮೇ 1886.

ನಂ. 52-15-21A, ತಾರೀಖು 20ನೇ ಸೆಪ್ಟಂಬರ್ 1886.

2. ಖರ್ಜೂರದ ಬೀಜದಿಂದ ಮಾಡಿದ ಸೊಸಿಗಳೊಳಗೆ ಪ್ರಾಯೇಣ ಬಗೆಬಗೆಯಾದವುಗಳು ಯಿರುತ್ತೆಂದು ಡಾ॥ ಬೊನೇವಿಯವರು ಖಂಡಿತವಾಗಿ ತಿಳಿದು ಯಿರುತ್ತಾರಾಗಿ, ಬೀಜಗಳು ಅಲ್ಪಲಾಗವಡಿನಲ್ಲಿಯೂ, ಸುಲುಭವಾಗಿಯೂ ದೊರೆಯುವಣದರಿಂದ, ಯಿನ್ನು ಮೇಲೆ ನಾಡಿಕೆಯಾಗಿ ಬೀಜವನ್ನೇ ತರಿಸತಕ್ಕದ್ದೆಂಬದಾಗಿ ಇಂಡ್ಯ ಗವರ್ನಮೆಂಟಿನವರು ಅಭಿಪ್ರಾಯಪಡುತ್ತಾರೆ, ಇದರ ವ್ಯವಸಾಯಕ್ಕಾಗಿ ಬೇಕಾಗುವ ಬೀಜವನ್ನ ಪರಷ್ಯಾ ದೇಶದಿಂದಲಾಗಲಿ, ಈಜಿಪ್ಟ್ (ಐಗುಪ್ತ) ದೇಶದಿಂದಲಾಗಲಿ ತರಿಸಿಕೊಡುವ ವಿಷಯದಲ್ಲೂ ಯಿದಕ್ಕಾಗಿ ವರುಷಕ್ಕೆ 500 ರೂಪಾಯಿಗಳಿಗೆ ಜಾಸ್ತಿಯಿಲ್ಲದೇ ಹಣ ಕೊಡುವದಕ್ಕೂ ಸಹ ಇಂಡ್ಯ ಗವರ್ನಮೆಂಟಿನವರು ಸಿದ್ಧರಾಗಿ ಯಿ

ದ್ದಾರಿ, ಪರಂತು, ಯಿಂಡ್ಯ ದೇಶದಲ್ಲಿ ಖರ್ಜೂರದ ವ್ಯವಸಾಯದ ಪ್ರಕರಣವು ಮಃಖ್ಯವಾಗಿ ಬೀಜ ತರಿಸತಕ್ಕ ಬಗ್ಗೆ ತಗಲುವ ಖರ್ಚಿಗಾಗಿ ದಾಮೋಷಾಯಿ ಮೊಬಲಗನ್ನು ಕೊಡಲಿಕ್ಕೆ ————ಯವರು ಸಮರ್ಥರಾಗಿರುವರೆಂದು ನಂಬೋಣಾಗಿ ಯಿಧೆ, ಮತ್ತು ಈಗ ————ಯವರಿಗೆ ಜೇಕಾಗುವ ಬೀಜದ ತೇದಾದೂ, ವ ಅದರ ಖರೀದೀ ಲಾಗವಷೂ ವ ಖರ್ಚಿಗಾಗಿ ಕೊಡಲ್ಪಡುವ ದಾಮೂ ಷಾಯಿ ಮೊಬಲಗು ಯೇನಾದರೂ ಯಿದ್ದಲ್ಲಿ ಅದು ಸಹ ಯಿಂಡ್ಯ ಗವರ್ಮೆಂಟಿನವರಿಗೆ ಸಾಧ್ಯವಾದಷ್ಟುತ್ವರ್ಯೆದಲ್ಲಿ ತಿಳಿಸಲ್ಪಡಬೇಕೆಂದು ಕೋರೋಣವಾಗಿಧೆ.

ತಮ್ಮ ವಿಧೇಯನಾದ ಡಬ್ಳಿಯೂ. ಆರ್. ಲಾರ್ಕ್ಸ್,
ಇಂಡ್ಯ ಗವರ್ಮೆಂಟಿನ ಅಂಡರ್ ಸೆಕ್ರಿಟೆರಿ.

ಲಂಡನ್, ತಾರೀಖು 4ನೇ ಜುಲ್ಯೆ 1887.

ಇಂಡ್ಯನ್ ಮೆಡಿಕಲ್ ಇಲಾಖಾ ಬ್ರಿಗೇಡ್ ಸರ್ಜನ್‌ರಾದ (ರಜಾ ಮೇಲಿರುವ) ಡಾಕ್ಟರ್ ಈ. ಬೋನೇವಿಯವರು ಯವರಿಂದ, ವಾಯವ್ಯ ದೇಶಗಳ ವ ಅಯೋಧ್ಯ ಗವರ್ಮೆಂಟಿನ ಸೆಕರಟೇರಿಯವರಿಗೆ.

ಐಯ್ಯಾ,

ಖರ್ಜೂರದ ಗಿಡಗಳು ಕುರಿತ ವಾಯವ್ಯ ದೇಶಗಳ ವ ಅಯೋಧ್ಯ ಗವರ್ಮೆಂಟಿಗಾಗಿ, ಈ ಕೆಳಗೆ ಬರುವ ಸಂಗತಿಗಳನ್ನ ತಿಳಿಸುತ್ತೇನೆ.

2. ಉಪಯೋಗವುಳ್ಳ ಈ ಗಿಡಗಳನ್ನ ಇಂಡ್ಯ ದೇಶದೊಳಗೆ ಹೇರಳವಾಗಿ ಪ್ರಚಾರ ಪಡಿಸಿದಲ್ಲಿ ಉತ್ತರೋತ್ತರ ಜನಗಳಿಗೆ ಬಹಳ ಲಾಭಕರವಾಗುವದೆಂದು ನನಿಗೆ ಖಂಡಿತವಾಗಿ ತಿಳಿಯಬಂದಿರುವದರಿಂದ, ಅದು ಯಾವ ಯಾವ ದೇಶಗಳಲ್ಲಿ ವಿಸ್ತಾರವಾಗಿ ಬೆಳೆಯುತ್ತದೆಯೋ ಅಂಥಾ ದೇಶಗಳಿಂದಲ್ಯಾವತ್ತೂ ಅದನ್ನು ಕುರಿತ ತಪಶೀಲನ್ನು ತರಿಸಿ ಇರುತ್ತೇನೆ, ಈತಪಸೀಲುಗಳನ್ನ ಇಂಡ್ಯ ಗವರ್ಮೆಂಟಿನವರ ವ್ಯವಸ್ಥೇ ಬಗ್ಗೆ ಕಳುಹಿಸಿ ಇರುತ್ತೇನೆ.

3. ಖರ್ಜೂರದ ಸೊಸಿಗಿಡಗಳು ಉಪಯೋಗಿಸೀತೇ ಹ್ಯಾಗೆ ಯಂಬುವ ವಿಷಯದಲ್ಲಿ ಇಂಡ್ಯ ದೇಶದವರಿಗೆ ಇನ್ನೂ ಸಂಶಯ ವುಂಟಾಗಬಹುದೆಂದು, ಇದಕುರಿತು ವಿಚಾರ ಮಾಡುವದರಲ್ಲಿ ವಿಶೇಷವಾಗಿ ನಿಗೆ ಕೊಟ್ಟುರುತ್ತೇನೆ; ಆಲ್ಜೀರಿಯ ಮತ್ತು ಟ್ಯೂನಿಸ್ ಎಂಬ ಸ್ಥಳಗಳಿಗೆ ಹರಮೇಜಸ್ಟೀಯವರ ಕೌನ್ಸಲ್ ಜನರಲ್‌ರಾದ ಸರ್ ಆರ್ ಲ್ಯಾಂಬರಟ್ ಪೈಕ್ಸೇರ್‌ಯವರು ಆಲ್ಜೀರಿಯ ಯಂಬ ಸ್ಥಳದಿಂದ ಬರೆದ 1887ನೇ ಇಸವಿ ಜನವರೀ 11ನೇ ತಾರೀಖಿನ ಲೆಟರಿನಲ್ಲಿ ನಮೂದಿರುವದೇನಂದರೆ-"ನೀವು ಹೇಳಿದಂತೆಯೇ ಸೊಳಿಕೆಗಳನ್ನ ಇಂಡ್ಯದೇಶಕ್ಕೆ ಕಳುಹಿಸುವ ವಿಷಯದಲ್ಲಿ ತೊಂದರೆಯೇನೂ ಇರುವದಿಲ್ಲ, ಪರಂತು, ಆ ರೀತಿ ಅಜಮಾಯಿಷೀ ಮಾಡಬೇಕಾದವಶ್ಯಕತೆಯೇ ಇರುವದಿಲ್ಲ; ಬೀಜಗಳಿಂದಲೇ ಸೊಳಿಕೆಗಳಾಗುತ್ತವೆ, ಇಲ್ಲಿರುವ ಅರಬ್ ಜನಗಳ ಅನುಭವದ ಮೇಲೆ ತಿಳಿಯಬರುವದೇನಂದರೆ--ಬೀಜದಿಂದ ಹುಟ್ಟಿದ್ದ ಸೊಸಿಗಳ ಗಿಡದಲ್ಲಿ ಬಿಟ್ಟ ಹಣ್ಣು, ಗಿಡದ ಬುಡದಲ್ಲೇ ಕವಲು ಬಡಿದ ಸೊಸಿಗಳಿಂದ ಆದ ಗಿಡಗಳ ಹಂಣಿನಂತೆಯೇ ಚನ್ನಾಗಿ ಇರುತ್ತದೆ-ಪರಂತು, ಇದರಲ್ಲಿ ಗಂಡು ಜಾತಿಯ ಗಿಡಗಳೇ ಹೆಚ್ಚಾಗಿ ಕೇರುವ ಸಂಭವ ವುಂಟಾಗುತ್ತೆಂಬ ಬಂದು ಆಕ್ಷೇಪಣೆ ಮಾತ್ರವಿಧೆ." ಸೀ. ರೆಗ್ನಿಯರ್ ಎಂಬುವರು ಇದೇ ವಿಷಯದಲ್ಲಿ ಬರೆದ ಪುಸ್ತುಕದಲ್ಲಿ ಇರುವದೇನಂದರೆ "ಬೀಜದಿಂದ ಹುಟ್ಟಿದ ಸೊಳಿಕೆಗಳಲ್ಲಿ ಬೆರಿಕೆ ಜಾತಿಗಳು ವುಂಟಾಗುತ್ತವೆ ಅವುಗಳು ಪ್ರಾಯೇಣ ಪ್ರಸಿದ್ಧವಾದ ಬೇರೆ ಬೇರೆ ಜಾತಿಗಳಾಗಿಯೇ ನಿಂತು ಹೋಗುತ್ತದೆ, ಕೆಲವು ವೇಳೆ ಶುದ್ಧ ಹೊಸ ಜಾತಿಗಳು ವುಂಟಾಗಿ ತರುವಾಯ ಅವುಗಳ ಬುಡದಲ್ಲಿ ಕವಲುಗಳು ಹೊರಡುತ್ತವೆ."

4. ಖರ್ಜೂರದ ಸೊಳಿಕೆಗಳೇ ಉಪಯೋಗವಾದ್ದೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಸಂಗತಿಯೇ ನಿದರ್ಶನವಾಗಿರುತ್ತದೆ. ಆಗಲೇ ಇಂಡ್ಯ ದೇಶದಲ್ಲಿ ಇದರ ಅನುಭವ ಬಂದಿರುತ್ತದೆ. ನಾನು ಇಂಡ್ಯ ದೇಶದಿಂದ ರಜಾದ ಮೇಲೆ ಹೋಗುವದಕ್ಕೆ ಮುಂಚೆ ಅಯೋಧ್ಯ, ಮುಲ್ತಾ ಈ ರಾಜ್ಯಗಳಲ್ಲಿ ಸೊಳಿಕೆಯಿಂದ ಮಾಡಿದ ಗಿಡಗಳಲ್ಲಿ ಆದ ಮೊಳ್ಳೇ ತರಹಾನಾರ್ ಖರ್ಜೂರದ ಹಂಣುಗಳನ್ನ ಕ್ಯೂ ಸ್ಥಳದಲ್ಲಿರುವ ರಾಯಲ್ ಬಾಟ್ಯಾಗಿನ ಡೈರೆಕ್ಟರ್ ಯವರಿಗೆ ಕಳುಹಿಸಿದೆನು. ಅವುಗಳು ಈಗ ಕ್ಯೂ ಇಕನಾಮಿಕ್ ಮ್ಯೂಜಿಯಂನಲ್ಲಿ ಇರುತ್ತವೆ. ಇದಲ್ಲದೆ ಬೀಜದಿಂದ ಮೊಳಕೆ ಮಾಡಿದ ಗಿಡದ ವಿಷಯದಲ್ಲಿ ಸರ್ ಲ್ಯಾಂಬರಟ್ ಪೈಕ್ಸೇರ್‌ಯವರು ಯಾವ ಅಂಶವು ಸ್ವಲ್ಪ ಆಕ್ಷೇಪಣೀಯವಾದ್ದೆಂದು ಎಣಿಸುತ್ತಾರೋ ಅದೇ ಅಂಶ ಆರಂಭದಲ್ಲಿ ಇಂಡ್ಯ ದೇಶಕ್ಕೆ ಅಪಯೋಗಕಾರಿಯಾಗಿರುವದೆಂದು ನಾನು ಎಣಿಸುತ್ತೇನೆ. ಗಂಡು ಜಾತಿ ಗಿಡದ ಹುವ್ವಿನ ಮೇಲಿನ ಹಿಟ್ಟನ್ನ ಹೆಂಣು ಜಾತಿ ಗಿಡದ ಹುವ್ವಿನ ಮೇಲೆ ಉದರಿಸುವಣದರಿಂದ ಹೆಂಣು ಗಿಡಗಳನ್ನ ಫಲವತ್ತಾಗಿ ಮಾಡುವಂಥಾ ವಿಷಯವೇ ಇಂಡ್ಯದೇಶದಲ್ಲಿ ಸರ್ವತ್ರ ಅದ್ಯಾಪಿ ತಿಳಿಯದೇಲೇ ಇದೆ. ಆದ್ದರಿಂದ ಗಿಡಗಳಲ್ಲಿ ಹೆಂಣು ಜಾತಿಗಿಂತ ಲೂ ಗಂಡು ಜಾತಿಯೇ ಜಾಸ್ತೀಯಾಗಿದ್ದರೇನೇ ಬೆಳೆ ಆಗುವದಲ್ಲದೆ, ಬೆಳೆ ಇಷುವಂಥಾವರಿಗೆ ನಿರುತ್ಸಾಹ ಉಂಟಾಗಲಾರದು. ಕಾಲಕ್ರ